**ಪ್ರಧಾನ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 1564/2022**

**ಸಾಕ್ಷಿಃ ಸಿಡಬ್ಲ್ಯೂಃ 1, ಪಿ.ಡಬ್ಲ್ಯೂಃ 1**

| | |
|---|---|
| ಸಾಕ್ಷಿದಾರನ/ಳ ಹೆಸರು | : ಖತೀಜಾ ಸಮ್ರೀನ್ |
| ತಂದೆಯ/ಗಂಡನ ಹೆಸರು | : ಫಜ್ಲೂರ್ ರೆಹಮಾನ್ |
| ವಯಸ್ಸು | : 38 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ್ತವ್ಯ | : ನಸೀಮಾ ಆಯಿಲ್ ಮಿಲ್ ನ ಹತ್ತಿರ, ಸಲ್ಮಾನಾಬಾದ್, ಭಟ್ಕಳ. |

**ಸತ್ಯ ಪ್ರತಿಜ್ಞೆಯ ಮೇರೆಗೆ, ತಾಃ 09/02/2023**

**ಮುಖ್ಯ ವಿಚಾರಣೆ : ಎಪಿಪಿಯವರಿಂದ,**

ದಿನಾಂಕ 12.11.2021 ರಂದು ರಾತ್ರಿ ರಂಗಿನಕಟ್ಟೆಯಲ್ಲಿರುವ ನಮ್ಮ ಮನೆಯಲ್ಲಿ ಕಳ್ಳತನವಾಗಿತ್ತು. ಆ ಸಮಯದಲ್ಲಿ ನನ್ನ ಸಹೋದರನು ತೀರಿಕೊಂಡಿದ್ದುದ್ದರಿಂದ ನಾನು ನನ್ನ ತಾಯಿ ಮನೆಯಲ್ಲಿದ್ದೆನು. ದಿನಾಂಕ 13.11.2021 ರಂದು ನಾನು ನನ್ನ ಮಕ್ಕಳನ್ನು ಶಾಲೆಗೆ ಕಳುಹಿಸುವ ಸಲುವಾಗಿ ಮನೆಗೆ ಬಂದಾಗ ಕಳುವಾದ ಬಗ್ಗೆ ಗೊತ್ತಾಗಿರುತ್ತದೆ.

ನಮ್ಮ ಮನೆಯ ಮುಖ್ಯ ಬಾಗಿಲನ್ನು ತೆಗೆದು, ಮಲಗುವ ಕೋಣೆಯಲ್ಲಿರುವ ಅಲ್ಮೇರಾದಲ್ಲಿನ ನನ್ನ ಒಂದು ಬ್ರೇಸ್ಲೆಟ್, ಕಿವಿ ಓಲೆ ಒಂದು ಜೊತೆ, 2 ಉಂಗುರಗಳನ್ನು ಕಳುವು ಮಾಡಿರುತ್ತಾರೆ. ಸದ್ರಿಯದರ ಒಟ್ಟು ಕಿಮ್ಮತ್ತು 1,65,000/– ರೂ. ಮೌಲ್ಯದಾಗಿದ್ದವು.

ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ವಿಷಯವನ್ನು ತಿಳಿಸಿರುತ್ತೇನೆ. ನಂತರ 12.30 ಗಂಟೆ ಸುಮಾರಿಗೆ ಸ್ಥಳಕ್ಕೆ ಶ್ವಾನದಳದವರು ಬಂದಿರುತ್ತಾರೆ. ಶ್ವಾನದಳದವರು ಬಂದು ಮನೆಯನ್ನು ಪರಿಶೀಲಿಸಿ ಪೊಲೀಸರು ಪಂಚನಾಮೆಯನ್ನು ಜರುಗಿಸಿದ ನಂತರ ನಾನು ಮರಳಿ ಠಾಣೆಗೆ ಹೋಗಿ ದೂರನ್ನು ದಾಖಲಿಸಿರುತ್ತೇನೆ.



ಪಂಚನಾಮೆಯ ಮೇಲೆ ನನ್ನ ಸಹಿ ಹಾಕಿರುತ್ತೇನೆ. ಪಂಚನಾಮೆ ಕಾಲಕ್ಕೆ ಪೊಲೀಸರು ಸ್ಥಳದ ಪೋಟೋಗಳನ್ನು ತೆಗೆದಿರುತ್ತಾರೆ. ಪಂಚನಾಮೆಯ ಸಮಯದಲ್ಲಿ ಚಾಸಾ.2 ಮತ್ತು 3 ರವರು ಉಪಸ್ಥಿತರಿದ್ದರು.

ನಂತರ ಪೊಲೀಸರು ಆರೋಪಿಯನ್ನು ಪೊಲೀಸ್ ಠಾಣೆಗೆ ಕರೆದು ತಂದಿದ್ದರು. ಪೊಲೀಸರು ಆರೋಪಿಯ ಬಳಿಯಿಂದ ಕಳುವಾದ ಬಂಗಾರದ ಆಭರಣಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿದ್ದು, ಆತನೇ ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುತ್ತಾನೆ ಎಂದು ನುಡಿದಿರುತ್ತಾರೆ.

ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.1 ಎಂದು, ಸಾಕ್ಷಿ ಸಹಿಯನ್ನು ನಿಪಿ.1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.2 ಎಂದು, ಸಾಕ್ಷಿ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯ ಸಮಯದಲ್ಲಿ ತೆಗೆದ ಪೋಟೋದಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.3 ಎಂದು, ಸಿಡಿಯನ್ನು ನಿಪಿ.4 ಎಂದು ಗುರುತಿಸಲಾಯಿತು.

ಪೊಲೀಸರು ಪೊಲೀಸ್ ಠಾಣೆಯಲ್ಲಿ ಆರೋಪಿತನ ಬಳಿಯಿಂದ ಬಂಗಾರದ ಆಭರಣಗಳನ್ನು ತನ್ನ ಸಮಕ್ಷಮ ಜಪ್ತುಪಡಿಸಿಕೊಂಡ ಸಮಯದಲ್ಲಿ ತೆಗೆದ ಪೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.5 ಎಂದು ಗುರುತಿಸಲಾಯಿತು.

ಸಾಕ್ಷಿಯು ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.6 ಎಂದು, ಸಾಕ್ಷಿ ಸಹಿಯನ್ನು ನಿಪಿ.6 ಎ ಎಂದು ಗುರುತಿಸಲಾಯಿತು.



**ಪಾಟೀ ಸವಾಲು : ಆರೋಪಿ ಪರ ಶ್ರೀ ವಿ ಎಫ್ ಜಿ ವಕೀಲರಿಂದ,**

ಸ್ಥಳಕ್ಕೆ ಪೊಲೀಸರು ಮತ್ತು ಶ್ವಾನದಳದವರು ಸೇರಿಯೇ ಬಂದಿದ್ದರು. ಅದಾದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಘಟನೆ ಕುರಿತು ದೂರನ್ನು ದಾಖಲಿಸಿರುತ್ತೇನೆ. ನಾನು ದೂರನ್ನು ದಾಖಲಿಸಲು ಠಾಣೆಗೆ ಹೋದಾಗ ಆರೋಪಿ ಠಾಣೆಯಲ್ಲಿ ಇರಲಿಲ್ಲ. ದೂರನ್ನು ದಾಖಲಿಸಿದ ನಂತರ ನಾನು ಮನೆಗೆ ಬಂದಿದ್ದು, ಊಟ ಮುಗಿಸಿ ಮತ್ತೇ ಠಾಣೆಗೆ ಹೋಗಿರುತ್ತೇನೆ. ಊಟ ಮುಗಿಸಿ ನಂತರ ನಾನು ಠಾಣೆಗೆ ಹೋದಾಗ ಆರೋಪಿಯು ಬಂಗಾರದ ಆಭರಣಗಳೊಂದಿಗೆ ಠಾಣೆಯಲ್ಲಿದ್ದನು. ಆರೋಪಿಯು ಸದ್ರಿ ಆಭರಣಗಳನ್ನು ಪೊಲೀಸರಿಗೆ ಕೊಟ್ಟಿರುತ್ತಾರೆ. ಪೊಲೀಸರು ಸದ್ರಿಯವುಗಳನ್ನು ನನಗೆ ತೋರಿಸಿ ಪೋಟೋವನ್ನು ತೆಗೆದ ನಂತರ ಸದ್ರಿ ಆಭರಣಗಳನ್ನು ನನಗೆ ಕೊಟ್ಟಿರುತ್ತಾರೆ.

ಪಂಚನಾಮೆಗೆ ನಾನು ನಮ್ಮ ಮನೆಯಲ್ಲಿ ಸಹಿ ಹಾಕಿರುತ್ತೇನೆ. ನಾನು ಪೊಲೀಸ್ ಠಾಣೆಯಿಂದ ಆಭರಣಗಳನ್ನು ಪಡೆದು ಸಾಯಂಕಾಲ 6.30 ಗಂಟೆಗೆ ನಮ್ಮ ಮನೆಗೆ ಹೋಗಿರುತ್ತೇನೆ. ಪೊಲೀಸರು ನಮ್ಮ ಮನೆಯಲ್ಲಿ ಶ್ವಾನದಳದವರ ಸಮಕ್ಷಮ ಪಂಚನಾಮೆ ಜರುಗಿಸಿದ್ದು, ಪಂಚನಾಮೆಯನ್ನು ಜರುಗಿಸಿದ ನಂತರ ನಾನು ದೂರನ್ನು ದಾಖಲಿಸಿರುತ್ತೇನೆ.

ನಾನು ಹೇಳಿದ ಸಂಗತಿಯನ್ನು ಪೊಲೀಸರು ತನ್ನ ಕೈಯಿಂದ ದೂರನ್ನು ಬರೆದುಕೊಂಡಿರುತ್ತಾರೆ. ಪೊಲೀಸರು ಪಂಚನಾಮೆಯ ಸಮಯದಲ್ಲಿ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದಿದ್ದು, ನಂತರ ಠಾಣೆಗೆ ಹೋಗಿ ಪಂಚನಾಮೆಯ ಪ್ರಿಂಟ್ ನ್ನು ತೆಗೆದಿರುತ್ತಾರೆ. ನಂತರ ನನಗೆ ಓದಿ ಹೇಳಿರುತ್ತಾರೆ.

ಆರೋಪಿಯು ನಮ್ಮ ಮನೆಯಲ್ಲಿ ಕಳ್ಳತನ ಮಾಡಿರುತ್ತಾನೆ ಎಂದು ಪೊಲೀಸರು ಹೇಳಿದ ಮೇರೆಗೆ ನಾನು ಹೇಳುತ್ತಿದ್ದೇನೆ. ನಮ್ಮ ಮನೆಯಲ್ಲಿ ಸಿಸಿ ಕ್ಯಾಮರ ಅಳವಡಿಸಿರುವುದಿಲ್ಲ.

ಆರೋಪಿಗೂ ಮತ್ತು ಕಳ್ಳತನಕ್ಕೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಠಾಣೆಯಲ್ಲಿ ಸುಳ್ಳಾಗಿ ತಯಾರಿಸಿದ ದೂರು ಹಾಗೂ ಪಂಚನಾಮೆಗೆ ನಾನು ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ.5 ನ್ನು ತೋರಿಸಲಾಗಿದ್ದು, ಚಿನ್ನವನ್ನು ಹಸ್ತಾಂತರ



ಮಾಡುವ ವ್ಯಕ್ತಿ ಯಾರು ಎಂದು ಕೇಳಿದಾಗ ಆತನು ಯಾರು ಎಂದು ತನಗೆ ಗೊತ್ತಿರುವುದಿಲ್ಲ ಎಂದು ಹೇಳಿರುತ್ತಾರೆ.

ಚಾಸಾ.2 ರಿಂದ 4 ರವರು ನಮ್ಮ ನೆರೆಹೊರೆಯವರು. ಆರೋಪಿತನು ನನ್ನ ಸಮಕ್ಷಮ ಪೊಲೀಸ್ ಠಾಣೆಯಲ್ಲಿ ಚಿನ್ನಾಭರಣಗಳನ್ನು ಪೊಲೀಸರಿಗೆ ಕೊಟ್ಟಿರುವುದಿಲ್ಲ, ಪೊಲೀಸರು ಯಾವುದೇ ಚಿನ್ನಾಭರಣಗಳನ್ನು ಜಪ್ತುಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**(ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಸಹಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**